# ಸುದ್ದಿ ಸಂಚಯ

## ಒರಿಸ್ಸಾದ ಬುಡಕಟ್ಟು ಜನಾಂಗದವರ ಸೇವೆಗೆ ಮುಂದಾದ ರಾಮಕೃಷ್ಣ ಮಿಷನ್

**ಒ**ರಿಸ್ಸಾ ರಾಜ್ಯದ ರಾಯಗಢ ಜಿಲ್ಲೆ ಅತ್ಯಂತ ಹಿಂದುಳಿದ ಪ್ರದೇಶವಾಗಿದೆ. ಬುಡಕಟ್ಟು ಜನರೇ ಹೆಚ್ಚಾಗಿ ವಾಸಿಸುವ ಈ ಪ್ರದೇಶದಲ್ಲಿ ಜನರು, ಮೂಲಭೂತ ಆವಶ್ಯಕತೆಗಳೂ ಇಲ್ಲದೆ, ಬಹಳ ದುಸ್ಥಿತಿಯಲ್ಲಿ ಇದ್ದಾರೆ. ರಾಷ್ಟ್ರದ್ರೋಹಿ ಶಕ್ತಿಗಳು ಜನರ ಈ ಅಸಹಾಯಕ ಸ್ಥಿತಿಯನ್ನು ದುರುಪಯೋಗಿಸಿಕೊಂಡು, ಪ್ರಕ್ಷುಬ್ಧ ಸ್ಥಿತಿಯನ್ನು ಅಲ್ಲಿ ನಿರ್ಮಾಣ ಮಾಡಿವೆ.

ಒರಿಸ್ಸಾ ರಾಜ್ಯ ಸರ್ಕಾರವು ರಾಯಗಢ-ಭವಾನಿಪುರ ರಸ್ತೆಯಲ್ಲಿ, ಹಟಮುನಿಗುಡ ಎಂಬಲ್ಲಿ, ಬುಡಕಟ್ಟು ಜನರ ಕಲ್ಯಾಣಕ್ಕಾಗಿ, ನೂರು ಎಕರೆಗಳಷ್ಟು ವಿಶಾಲವಾದ ಜಾಗವನ್ನು ರಾಮಕೃಷ್ಣ ಮಿಷನ್ನಿಗೆ ಕೊಡಮಾಡಿದೆ. ಈ ಸ್ಥಳದ ಜನರ ಬೇಡಿಕೆಗಳನ್ನು ಗಮನದಲ್ಲಿಟ್ಟುಕೊಂಡು, ರಾಮಕೃಷ್ಣ ಮಿಷನ್ ಈಗಾಗಲೇ ಒಂದು ಬೃಹತ್ ಯೋಜನೆಯ ನಕಾಶೆಯನ್ನು ಸಿದ್ಧಪಡಿಸಿದೆ. ಒಂದು ಸಾವಿರ ಬಾಲಕರಿಗಾಗಿ ಎಲ್ಲ ಬಗೆಯ ಆಧುನಿಕ ಸೌಲಭ್ಯಗಳಿರುವ ಇಂಗ್ಲಿಷ್ ಮಾಧ್ಯಮ ಪ್ರೌಢಶಾಲೆ, ಸುಮಾರು ೭೦೦ ಬಾಲಕರಿಗಾಗಿ ಒಂದು ಹಾಸ್ಟೆಲ್, ಶಾಲೆ ಬಿಟ್ಟ ಸುಮಾರು ೧೫೦ ಮಕ್ಕಳಿಗಾಗಿ ಉದ್ಯೋಗ ತರಬೇತಿ ಕೇಂದ್ರ ಮತ್ತು ಅವರಲ್ಲಿ ೧೦೦ ಮಕ್ಕಳಿಗೆ ಹಾಸ್ಟೆಲ್, ಎರಡು ಸಂಚಾರಿ ಘಟಕಗಳಿರುವ ಒಂದು ಸುಸಜ್ಜಿತ ಔಷಧಾಲಯ, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಾಗಿ ವಸತಿಗೃಹಗಳು, ಸಾಧುನಿವಾಸ, ವಿಶಾಲವಾದ ದೇವಮಂದಿರ, ಪೋಷಕರಿಗೆ ಮತ್ತು ಅತಿಥಿಗಳಿಗೆ ಅತಿಥಿಗೃಹ – ಇವೆಲ್ಲವೂ ಈ ಯೋಜನೆಯಲ್ಲಿ ಸೇರಿವೆ. ಸುಮಾರು ೧೮ ಕೋಟಿ ರೂಪಾಯಿಗಳ ಅಂದಾಜಿನ ಈ ಯೋಜನೆಯನ್ನು ಐದು ವರ್ಷಗಳಲ್ಲಿ ಕಾರ್ಯಗತಗೊಳಿಸಲಾಗುವುದು.

## ಪಶ್ಚಿಮ ಬಂಗಾಳದಲ್ಲಿ 'ವಿವೇಕವಾಹಿನಿ'



**ಮೈ**ಸೂರಿನ ಶ್ರೀರಾಮಕೃಷ್ಣ ಆಶ್ರಮದ ವತಿಯಿಂದ ಆರಂಭವಾದ 'ಜ್ಞಾನವಾಹಿನಿ' ಸಂಚಾರಿ ಜ್ಞಾನಪ್ರಸಾರ ಅಭಿಯಾನವು, ದೇಶದ ಇತರೆಡೆಗಳಲ್ಲಿಯೂ ಇದೇ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಒತ್ತಾಸೆಯನ್ನು ನೀಡಿದೆ. ಈಗಾಗಲೇ ತಮಿಳುನಾಡು ಮತ್ತು ಆಂಧ್ರಪ್ರದೇಶಗಳಲ್ಲಿ ಸಂಚಾರಿ ಜ್ಞಾನಪ್ರಸಾರ ಅಭಿಯಾನಗಳು ಯಶಸ್ವಿಯಾಗಿ ನಡೆಯುತ್ತಿವೆ. ಇತ್ತೀಚೆಗೆ ಪಶ್ಚಿಮ ಬಂಗಾಳ ರಾಜ್ಯದಲ್ಲಿಯೂ ಈ ಬಗೆಯ ಯೋಜನೆಯು 'ವಿವೇಕವಾಹಿನಿ' ಎಂಬ ಹೆಸರಿನಲ್ಲಿ ಆರಂಭವಾಗಿದೆ.

ಕೊಲ್ಕತಾದ ಕಾಂಕುರ್‌ಗಾಚಿಯಲ್ಲಿರುವ ರಾಮಕೃಷ್ಣ ಮಠ (ಯೋಗೋದ್ಯಾನ) ದ ವತಿಯಿಂದ ನಡೆಯುವ 'ವಿವೇಕವಾಹಿನಿ' ಅಭಿಯಾನವನ್ನು, ರಾಮಕೃಷ್ಣ ಮಹಾಸಂಘದ ಪ್ರಧಾನ ಕೇಂದ್ರವಾದ ಬೇಲೂರುಮಠದ ಪವಿತ್ರ ಪ್ರಾಂಗಣದಲ್ಲಿ, ಮಹಾಸಂಘದ ಪರಮಾಧ್ಯಕ್ಷರಾದ ಪರಮಪೂಜ್ಯ ಶ್ರೀಮತ್ ಸ್ವಾಮಿ ಆತ್ಮಸ್ಥಾನಂದಜಿ ಮಹಾರಾಜ್ ಅವರು ನವೆಂಬರ್ ೧೨ ರಂದು, ವಿಧ್ಯುಕ್ತವಾಗಿ ಉದ್ಘಾಟಿಸಿದರು.

ಈ ಅಭಿಯಾನದ ಮೊದಲ ಯಾತ್ರೆಯಾಗಿ, ಡಿಸೆಂಬರ್ ೩ ರಂದು ಶ್ರೀರಾಮಕೃಷ್ಣ ಮತ್ತು ಶ್ರೀಮಾತೆ ಶಾರದಾದೇವಿಯವರ ಜನ್ಮಸ್ಥಾನಗಳಾದ, ಕಾಮಾರಪುಕುರ ಮತ್ತು ಜಯರಾಂಬಾಟಿಗೆ 'ವಿವೇಕವಾಹಿನಿ' ವಾಹನವನ್ನು ಕರೆದೊಯ್ಯಲಾಯಿತು.

## ಬೆಳಗಾವಿಯ ಆಶ್ರಮದ ಸೇವಾಕಾರ್ಯ

**ಹಿಂ**ದಿನ ವರ್ಷದಂತೆ, ಇಂದಿನ ವರ್ಷವೂ ಕೂಡ, ಬೆಳಗಾವಿಯ ರಾಮಕೃಷ್ಣ ಮಿಷನ್ ಆಶ್ರಮದ ವತಿಯಿಂದ ಹತ್ತಿರದ ಪ್ರದೇಶಗಳು ಮತ್ತು ಗ್ರಾಮಗಳಿಗೆ ಸೇರಿದ ೨೦೦ ಬಡಜನರಿಗೆ ಕಂಬಳಿಗಳನ್ನು ವಿತರಿಸಲಾಯಿತು. ಬೆಳಗಾವಿಯ ಜಿಲ್ಲಾ ನ್ಯಾಯಾಧೀಶರಾದ ಶ್ರೀ ವಿಶ್ವನಾಥ ಅಂಗಡಿ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಬೆಳಗಾವಿಯ ಹಲವಾರು ಗಣ್ಯರು ಭಾಗವಹಿಸಿದ್ದರು. ಕಂಬಳಿಗಳನ್ನು ಪಡೆದುಕೊಂಡ ಜನರನ್ನು ಮುಂಚೆಯೇ ಆರಿಸಿ, ಗುರುತಿನ ಚೀಟಿಗಳನ್ನು ನೀಡಲಾಗಿತ್ತು. ಅವರಿಗೆ ಆಹಾರದ ಪ್ಯಾಕೆಟ್‌ಗಳನ್ನು ಕೂಡ ನೀಡಲಾಯಿತು. ಅಲ್ಲದೆ, ದಿವ್ಯತ್ರಯರ ಬಗ್ಗೆ ಸರಳ ಭಾಷೆಯಲ್ಲಿ ರಚಿಸಿದ ಪುಸ್ತಕಗಳನ್ನು ಕೂಡ ವಿತರಿಸಲಾಯಿತು.